ಪಂಜರದಿಂದ ಪಂಜರಕ್ಕೆ ನೆಗೆಯುತ್ತಾ ಹೋದೆ. ನನ್ನನ್ನೇ ನಾನು ಕಳೆದುಕೊಳ್ಳುತ್ತಾ ಹೋದೆ. ನನ್ನೆಲ್ಲ ಪ್ರಾರ್ಥನೆಗಳು ವ್ಯರ್ಥಗೊಂಡವು.

ನನ್ನ ಕಣ್ಣೀರು ಎಂದೋ ಬತ್ತಿಹೋಯಿತು! ನಾನೀಗ ಪ್ರಾರ್ಥನೆ ಮಾಡುವುದನ್ನು ನಿಲ್ಲಿಸಿದ್ದೇನೆ.

ಎಲ್ಲವನ್ನೂ ಎದುರಿಸಿ ನಿಲ್ಲುವುದನ್ನು ಕಲಿತಿದ್ದೇನೆ.'

★★★

'ಕಂಡ ಕಂಡವರನ್ನೆಲ್ಲಾ ಕೈ ಚಾಚಿ ಅಂಗಲಾಚಬೇಡ ಮಗಳೆ. ಬಾ ನಿನಗೆ ಒಂದು ಮುರುಕು ರೊಟ್ಟಿ ಕೊಡುತ್ತೇನೆ' ಎಂದು ಕೈ ಹಿಡಿದು ಕರೆದೆ. ಅವಳು ನನ್ನ ಕೈ ಕೊಸರಿಸಿಕೊಂಡು, ನನ್ನ ಕಡೆಯೇ ನೋಡತೊಡಗಿದಳು. ಇಂತಹ ಕರುಣೆಯ ಮಾತುಗಳು ಅವಳ ಕಿವಿಗಳಿಗೆ ಅಪರಿಚಿತವಾಗಿದ್ದವು. ನನ್ನನ್ನು ಒಂದು ಕ್ಷಣ ರೆಪ್ಪೆ ಮಿಟುಕಿಸದೆ ನೋಡಿದಳು. ಆ ಕಣ್ಣುಗಳಲ್ಲಿ ದೈನ್ಯತೆಯಿತ್ತು, ಆದರೆ ಅಸಹಾಯಕತೆ ಇರಲಿಲ್ಲ! ಸ್ವಾಭಿಮಾನಿಗಳು ಸಾಮಾನ್ಯವಾಗಿ ಯಾರ ಹಂಗಿಗೂ ಒಳಗಾಗದೆ ಮೌನವಾಗಿಯೇ ಇರುತ್ತಾರೆ. ಕೆಂಗೂದಲಿನ ಆ ಪುಟ್ಟ ಬಾಲಕಿ ಹೀಗೆಯೆ ಇದ್ದಳು.

ಅವಳ ಕಣ್ಣುಗಳೊಡನೆ ಹೆಚ್ಚು ಮಾತನಾಡದೆ, 'ನಿನ್ನ ಹೆಸರೇನು ಕಂದಾ, ನಿನ್ನ ತಂದೆತಾಯಿ ಎಲ್ಲಿದ್ದಾರೆ? ಎಳೆಯ ವಯಸ್ಸಿನಲ್ಲೇ ಎಲ್ಲರ ಮುಂದೆ ಕೈ ಚಾಚಿ ಬೇಡುವುದು ತರವಲ್ಲ ಮಗು!'

